


ಹೂವಿನ ಗಡಿಯಾರ

# ನಂದನದ ತುಣುಕು ಇಂಟರ್‌ಲೇಕನ್



**ಸ್ವಿಟ್ಜರ್ಲೆಂಡ್‌ನ ಜನಪ್ರಿಯ ಪ್ರವಾಸಿ ತಾಣಗಳಲ್ಲಿ ಒಂದಾದ ಇಂಟರ್‌ಲೇಕನ್ ಎರಡು ಸರೋವರಗಳ ನಡುವಿರುವ ನಗರ. ಸ್ವಿಸ್ ಸಂಸ್ಕೃತಿಯ ಕನ್ನಡಿಯಂತೆಯೂ ಈ ನಗರವನ್ನು ನೋಡಬಹುದು.**

**■ ಕೆ.ಪಿ. ಸತ್ಯನಾರಾಯಣ**

ಯೂರೋಪ್ ಅಥವಾ ಸ್ವಿಟ್ಜರ್ಲೆಂಡ್‌ನ ಪ್ರವಾಸ ಎಂದ ಮೇಲೆ ಭೇಟಿ ಕೊಡುವ ಪ್ರವಾಸಿ ತಾಣಗಳ ಪಟ್ಟಿಯಲ್ಲಿ ಇಂಟರ್‌ಲೇಕನ್‌ಗೆ ಸ್ಥಾನವಿದ್ದೇ ಇರುತ್ತದೆ. ಆ ಮಟ್ಟಿಗೆ ಅದು ಸ್ವಿಟ್ಜರ್ಲೆಂಡ್‌ನ ಪ್ರವಾಸಿ ಸ್ಥಳಗಳಲ್ಲಿ ಅದು ಪ್ರಸಿದ್ಧವಾಗಿದೆ.

ಇಂಟರ್‌ಲೇಕನ್ ಎಂದರೆ ಸರೋವರಗಳ ನಡುವೆ ಇರುವ ಪ್ರದೇಶ ಎಂದರ್ಥ. ಸ್ವಿಟ್ಜರ್ಲೆಂಡ್‌ನ ಒಂದು ಪ್ರಮುಖ ಪ್ರವಾಸಿ ತಾಣವಿದು. ಪೂರ್ವಕ್ಕೆ ಬ್ರಿಯೆಂಝ್ ಹಾಗೂ ಪಶ್ಚಿಮದಲ್ಲಿ ಥನ್ ಸರೋವರಗಳ ನಡುವೆ, ಸಮುದ್ರಮಟ್ಟದಿಂದ 1855 ಅಡಿಗಳ ಎತ್ತರದಲ್ಲಿ ಈ ನಗರವಿದೆ. ಆರೆ (Aare) ಎನ್ನುವ ನದಿ ಈ ಎರಡು ಸರೋವರಗಳ ನಡುವೆ ಹರಿಯುತ್ತದೆ.

ಹಿಂದಿ ಚಲನಚಿತ್ರಗಳ ಪ್ರಸಿದ್ಧ ನಿರ್ಮಾಪಕ ಯಶ್ ಚೋಪ್ರಾ ಅವರ ಹಲವಾರು ಚಿತ್ರಗಳ ಚಿತ್ರೀಕರಣ ಇಲ್ಲಿ ನಡೆದಿದೆ. ಹಾಗಾಗಿ ಅವರನ್ನು 'ಇಂಟರ್‌ಲೇಕನ್‌ನ ರಾಯಭಾರಿ' ಎಂದೂ ಕರೆಯಲಾಗುತ್ತದೆ. ಯಶ್ ಚೋಪ್ರಾ ಅವರ ಆಕರ್ಷಕ ಲೋಹದ ಪ್ರತಿಮೆಯನ್ನು ಇಲ್ಲಿ ಇರಿಸಲಾಗಿದೆ. ಇಂಟರ್‌ಲೇಕನ್‌ಗೆ ಬರುವ ಭಾರತೀಯ ಯಶ್ ಚೋಪ್ರಾ ಪ್ರತಿಮೆಯೊಡನೆ ಫೋಟೊ ತೆಗೆದುಕೊಂಡು ಸಂಭ್ರಮಿಸುತ್ತಾರೆ.

ಆಲ್ಪೈನ್ ಪರ್ವತ ಸಾಲಿನ ಪ್ರಮುಖ ಶಿಖರಗಳಾದ ಐಗರ್, ಮಾಂಕ್ ಮತ್ತು ಜುಂಗ್ಫ್ರು ಈ ನಗರದ ಸೌಂದರ್ಯಕ್ಕೆ ಕಳಶವಿಟ್ಟಂತೆ ಇವೆ. ಜುಂಗ್ಫ್ರು ಶಿಖರವಂತೂ ವರ್ಷದ ಎಲ್ಲಾ ಕಾಲದಲ್ಲೂ ಹಿಮಾವೃತವಾಗಿದ್ದು, 'ಶಿಖರಗಳ ರಾಣಿ' ಎಂದು ಕರೆಸಿಕೊಂಡಿದೆ. ಜುಂಗ್ಫ್ರು ಎಂದರೆ ಯಾರೂ ಸ್ಪರ್ಶಿಸದ (virgin) ಎಂದರ್ಥ. ಆದರೆ 'ಯಾರೂ ಸ್ಪರ್ಶಿಸದ', 1485 ಮೀಟರ್ ಎತ್ತರದ ಈ ಶಿಖರ 1811ರಲ್ಲಿ ಮೊದಲ ಬಾರಿಗೆ ಅಧಿಕೃತವಾಗಿ ಮಾನವಸ್ಪರ್ಶವಾಗಿ ತನ್ನ ವಿಶೇಷಣವನ್ನು ಕಳೆದುಕೊಂಡಿತು. ಆ ನಂತರ ಚಾರಣ, ಪರ್ವತಾರೋಹಣ ಪ್ರಿಯರು ಈ ಶಿಖರದತ್ತ ಆಕರ್ಷಿತರಾಗಿ, ಅಸಂಖ್ಯ ಸಂಖ್ಯೆಯಲ್ಲಿ ಇಲ್ಲಿಗೆ ಭೇಟಿ ಕೊಡುತ್ತಲಿದ್ದಾರೆ.

ಇಂಟರ್‌ಲೇಕನ್ ಚರ್ಚಿನ ಸ್ಥಾಪನೆಯಾದುದು 1133ರಲ್ಲಿ. ಆಗ ಇದು ಆರ್ಮುಲ್ ಎಂಬ ಸಣ್ಣ ಹಳ್ಳಿಯಾಗಿತ್ತು. ಮರದ ನೆಲಹಾಸು ಹಾಗೂ ಉಣ್ಣೆಯ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದವು. ಹಳ್ಳಿ ಬೆಳೆದು ಪಟ್ಟಣವಾಗಿ, 1891ರಲ್ಲಿ ಇಂಟರ್‌ಲೇಕನ್ ಎಂದು ಹೆಸರಾಯಿತು. ಇಲ್ಲಿ ನಡೆಯುವ ಸ್ವಿಸ್ ಸಂಸ್ಕೃತಿಯನ್ನು ಸಾರುವ ಅನೇಕ ನಾಡಹಬ್ಬಗಳ ಮೂಲಕ ಪ್ರವಾಸಿಗರನ್ನು ಆಕರ್ಷಿಸಲು ಸಾಧ್ಯವಾಯಿತು. ಅನೇಕ ಹೋಟೆಲ್‌ಗಳು, ರೆಸಾರ್ಟ್‌ಗಳು, ಪ್ರಕೃತಿ ಚಿಕಿತ್ಸಾ ಕೇಂದ್ರಗಳು ಪ್ರಾರಂಭವಾದವು.

ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ದೇಶದ ಅನೇಕ ನಗರಗಳಿಗೆ ರೈಲು ಹಾಗೂ ರಸ್ತೆ ಸಂಪರ್ಕ ದೊರೆತ ನಂತರ ಇಂಟರ್‌ಲೇಕನ್ ಸ್ವಿಟ್ಜರ್ಲೆಂಡ್‌ನ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದೆಂದು ಖ್ಯಾತವಾಯಿತು. ಸುತ್ತಲಿನ ಅನೇಕ ಮನಮೋಹಕ ತಾಣಗಳಿಗೆ ಇಲ್ಲಿಂದಲೇ ಪ್ರವಾಸ, ಚಾರಣ ಮಾಡಬಹುದಾಗಿದೆ. ಅನೇಕ ಪರ್ವತ ಶಿಖರಗಳನ್ನು ರೈಲು ದಾರಿಯ ಮೂಲಕ ಜೋಡಿಸಿರುವುದು ಇಲ್ಲಿನ ವಿಶೇಷವಾಗಿದೆ. ಇಂಟರ್‌ಲೇಕನ್ ಎರಡು ರೈಲ್ವೆ ಸ್ಟೇಷನ್ನುಗಳನ್ನು ಹೊಂದಿದೆ. ಇಲ್ಲಿಂದ ದೇಶದ ಅನೇಕ ಪ್ರಮುಖ ನಗರಗಳನ್ನು ತಲುಪಬಹುದು. ಇಂಟರ್‌ಲೇಕನ್‌ಗೆ ರೋಮ್, ಫ್ಲಾರೆನ್ಸ್, ಮ್ಯೂನಿಚ್ ಮತ್ತು ಪ್ಯಾರಿಸ್